# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

# ಶಹಾಪೂರ

PW.2

Crl. Misc.02/2022

| | | |
|---|---|---|
| ಹೆಸರು | ಃ | ಅಶೋಕಾ |
| ತಂದೆಯ ಹೆಸರು | ಃ | ಹನಮಂತ್ರಾವ್ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ಮೂಡಬುಳ, ತಾಃ ಶಹಾಪೂರ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 25-10-2025**

**ಮುಖ್ಯ ವಿಚಾರಣೆ ಃ ಅರ್ಜಿದಾರ ಪರ ಶ್ರೀಮತಿ JB ಮಾನ್ಯ ವಕೀಲರಿಂದಃ**

ಅರ್ಜಿದಾರರ ಲಕ್ಷ್ಮೀ ಇವರು ನನ್ನ ಮನೆಯ ಎದುರುಗಡೆ ವಾಸ ಮಾಡುತ್ತಾರೆ. ಎದುರುದಾರರು ಅರ್ಜಿದಾರ 1 ಲಕ್ಷ್ಮೀ ಹೆಂಡತಿಯಾಗಿರುತ್ತಾರೆ. 1 ನೇ ಅರ್ಜಿದಾರರು ಹಾಗೂ ಎದುರುದಾರರ ಮದುವೆಯು ಈಗ್ಗೆ 20 ವರ್ಷಗಳ ಹಿಂದೆ ಮೂಡಬುಳ ಗ್ರಾಮದಲ್ಲಿ ಆಗಿರುತ್ತದೆ. ಸದರಿಯವರ ಮದುವೆಯು ಯಾವ ಸ್ತಳದಲ್ಲಾಗಿರುತ್ತದೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ.

2. ಸುಮಾರು 10 ವರ್ಷಗಳವರೆಗೆ 1 ನೇ ಅರ್ಜಿದಾರರು ಹಾಗೂ ಎದುರುದಾರರು ಅನ್ಯೊನ್ಯವಾದ ವೈವಾಹಿಕ ಜೀವನವನ್ನು ಮಾಡಿರುತ್ತಾರೆ. ಸದರಿಯವರಿಗೆ ಮೂರು ಜನ ಮಕ್ಕಳಿದ್ದು ಅವರಲ್ಲಿ ನನಗೆ ನಿರಂಜನ್ ಎನ್ನುವವರ ಹೆಸರು ಮಾತ್ರ ಗೊತ್ತಿದ್ದು ಇನ್ನುಳಿದ ಇಬ್ಬರ ಮಕ್ಕಳ ಹೆಸರುಗಳು ಗೊತ್ತಿರುವುದಿಲ್ಲ. 1 ನೇ ಅರ್ಜಿದಾರರು ಹಾಗೂ ಎದುರುದಾರರು ಪ್ರತಿನಿತ್ಯ ಜಗಳವನ್ನು ಮಾಡುತ್ತಿದ್ದು ಆದರೆ ಯಾವ ವಿಚಾರಕ್ಕೆಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಎದುರುದಾರರು ಅವರ ತಾಯಿ ಮಾತನ್ನು ಕೇಳುತ್ತಾರೆ ಎಂದು 1 ನೇ ಅರ್ಜಿದಾರರು ಹಾಗೂ ಎದುರುದಾರರ ಮದ್ಯೆ ಜಗಳವಾಗುತ್ತಿತ್ತು ಎಂದು ಹೇಳುತ್ತಾರೆ. ಸದರಿ ಜಗಳವಾದ ನಂತರ 1 ನೇ ಅರ್ಜಿದಾರರು ಮೂಡಬುಳ

ಗ್ರಾಮದಲ್ಲಿರುವ ಅರ್ಜಿದಾರರ ಸ್ವಂತ ಮನೆಯಲ್ಲಿ ವಾಸ ಮಾಡುತ್ತಿದ್ದು ಹಾಗೂ ಎದುರುದಾರರು ಶಹಾಪೂರಿನಲ್ಲಿ ವಾಸ ಮಾಡುತ್ತಾರೆ. ಎದುರುದಾರು 2 ಎಕರೆ ಜಮೀನನ್ನು ಹೊಂದಿ ಉಳಿಮೆಯನ್ನು ಮಾಡಿಕೊಂಡಿರುತ್ತಾರೆ. ಎದುರುದಾರರು ಅರ್ಜಿದಾರರಿಗೆ ಜೀವನಾಂಶ ಕೊಡುವ ಆದಾಯವನ್ನು ಹೊಂದಿರುತ್ತಾರೆ.

**ಪಾಟಿ ಸವಾಲು ಎದುರುದಾರರ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು.**
**ಪ್ರ.ದ.ನ್ಯಾ.ದಂ. ಶಹಾಪೂರ.**